| ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು |
|---|

**ಎಸ್.ಸಿ. 21/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಅವಿನಾಶ ಜಾನ್ | | ಪ್ರಮಾಣ ಮಾಡಿದ ದಿನಾಂಕಃ |
| ತಂದೆ ಹೆಸರು | ಃ ಚಂದ್ರಮೋಹನ | | 04.04.2022 |
| ವಯಸ್ಸು | ಃ 32 ವರ್ಷ | | |
| ವೃತ್ತಿ | ಃ ಖಾಸಗಿ ಕೆಲಸ | | ಪಿಡಬ್ಲ್ಯೂ ಃ 1 |
| ವಾಸ ಸ್ಥಳ | ಃ ತಿಲಕ ನಗರ, ಮೈಸೂರು | | ಸಿಡಬ್ಲ್ಯೂ ಃ 1 |

*ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ*

ಚಾಸಾ-3 ಮತ್ತು 4 ನನ್ನ ಸಂಬಂಧಿಕರು. ಚಾಸಾ-2 ನನ್ನ ತಂದೆ. ಚಾಸಾ-6 ನನ್ನ ತಂಗಿ. ಚಾಸಾ-4, 5, 7 ರಿಂದ 10ರವರ ಪರಿಚಯ ಇದೆ. ಮೃತ ಪವಿತ್ರಾಕುಮಾರಿ ನನ್ನ ತಾಯಿ. ಈಕೆ ಗೃಹಿಣಿ ಆಗಿದ್ದಳು. ನನ್ನ ತಂದೆ ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಚಾಸಾ-6 ನನ್ನ ತಂಗಿ 7 ವರ್ಷಗಳ ಹಿಂದೆ ಬಿ.ಇ. ವ್ಯಾಸಾಂಗ ಮಾಡುತ್ತಿದ್ದಳು.

2. ಆರೋಪಿ ಕಡೆಯಿಂದ, ನನ್ನ ತಾಯಿ ಸಾಯುವ ಮೂರು ತಿಂಗಳ ಹಿಂದೆ ರೂ.40,000/- ಹಣ ಸಾಲವನ್ನು ತೆಗೆದುಕೊಂಡಿದ್ದರು. ಇದಕ್ಕೆ ಪ್ರತಿವಾರ ರೂ.4,000/-ಗಳ ಬಡ್ಡಿ ಕೊಡುತ್ತಿದ್ದಳು. ಒಂದು ವಾರದ ಕಂತು ಕಟ್ಟದೇ ಇದ್ದರೆ ಹೆಚ್ಚುವರಿ ರೂ.400/-ಗಳ ಬಡ್ಡಿ ಕೊಡುವಂತೆ ಆರೋಪಿ ಕೇಳುತ್ತಿದ್ದಳು. ನನ್ನ ತಾಯಿ ತೀರಿಕೊಳ್ಳುವ ಒಂದು ತಿಂಗಳ ಹಿಂದಿನಿಂದ ಆರೋಪಿಗೆ ಕಂತಿನ ಹಣ ಕಟ್ಟಿರಲಿಲ್ಲ. ನನ್ನ ತಾಯಿ ತೀರಿಕೊಳ್ಳುವ ಮೂರು ದಿನಗಳ ಹಿಂದೆ ರಾತ್ರಿ 10 ಗಂಟೆ ಸಮಯದಲ್ಲಿ ಆರೋಪಿ ನಮ್ಮ ಮನೆಗೆ ಬಂದು ನಮ್ಮ ತಾಯಿಗೆ ಕಂತು ಮತ್ತು ಬಡ್ಡಿಯ ಹಣ ಕಟ್ಟಿಲ್ಲ, ಎಲ್ಲವೂ ಸೇರಿ ರೂ.3,00,000/- ಆಗಿದೆ, ಅದನ್ನು ತಕ್ಷಣ ಕೊಡುವಂತೆ ಒತ್ತಾಯ ಮಾಡಿ ಗಲಾಟೆ ಮಾಡಿದ್ದರು. ಹಣ ಕೊಡಲು ಆಗದಿದ್ದರೆ ಏಕೆ ಬದುಕಿದ್ದೀಯಾ? ಎಲ್ಲಿಯಾದರೂ ಹೋಗಿ ಸಾಯಿ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದಳು. ಅದಕ್ಕೂ ಮೊದಲು ಕೂಡ ಪ್ರತಿ ವಾರ ನನ್ನ ತಾಯಿಯ ಮೇಲೆ ಆರೋಪಿ ಗಲಾಟೆ ಮಾಡುತ್ತಿದ್ದಳು.

3. ದಿನಾಂಕ 11.06.2015ರಂದು ನಾನು ಕೆಲಸದ ಮೇಲೆ ಕಚೇರಿಗೆ ಹೋಗಿದ್ದೆ. ಆ ದಿನ ನನ್ನ ತಾಯಿ, ತಂಗಿ ಹಾಗೂ ತಂದೆ ಮಾತ್ರ ಮನೆಯಲ್ಲಿದ್ದರು. ನನ್ನ ತಂದೆ, ನನ್ನ ತಂಗಿಯನ್ನು ಕರೆದುಕೊಂಡು ಕಾಲೇಜ್‌ಗೆ ಹೋಗಿದ್ದರು. ಆಗ ನನ್ನ ತಾಯಿ ಒಬ್ಬಳೇ ಮನೆಯಲ್ಲಿದ್ದಳು. ಸುಮಾರು ಮಧ್ಯಾಹ್ನ 12 ಗಂಟೆ ವೇಳೆಗೆ ನನ್ನ ತಂದೆ ಮತ್ತು ತಂಗಿ ಮನೆಗೆ ಹಿಂತಿರುಗಿ ಬಂದಿದ್ದು ಆ ಸಮಯದಲ್ಲಿ ನನ್ನ ತಾಯಿ ಜಿರಳೆ ಔಷಧಿಯನ್ನು ಸೇವಿಸಿ ಅಸ್ವಸ್ಥಳಾಗಿರುವುದು ಕಂಡು ಬಂತು. ಆಗ ನನ್ನ ತಂದೆ ನನ್ನ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನನಗೆ ನನ್ನ ತಂಗಿ ಫೋನ ಮಾಡಿ ತಕ್ಷಣ ಮೈಸೂರಿನ ಮಿಷನ್ ಆಸ್ಪತ್ರೆಗೆ ಬರುವಂತೆ ಹೇಳಿದಳು. ನಾನು ಆಸ್ಪತ್ರೆಗೆ ಹೋದಾಗ ನನ್ನ ತಾಯಿಗೆ ಐ.ಸಿ.ಯು.ನಲ್ಲಿ ಚಿಕಿತ್ಸೆ ಕೊಡುತ್ತಿದ್ದು, ಚಿಕಿತ್ಸೆ ಫಲಕಾರಿಯಾಗದೇ ಸಂಜೆ ಮೃತಪಟ್ಟಿರುತ್ತಾಳೆ.

4. ಆರೋಪಿ ಆಗಾಗ್ಗೆ ಮನೆಯ ಬಳಿ ಬಂದು ಬಡ್ಡಿ ಹಣ ಕೊಡುವಂತೆ ಒತ್ತಾಯ ಮಾಡಿ ಗಲಾಟೆ ಮಾಡಿ ಬೈಯುತ್ತಿದ್ದುದ್ದರಿಂದ ನನ್ನ ತಾಯಿ ಮನ ನೊಂದು ಆತ್ಮಹತ್ಯೆ ಮಾಡಿ ಕೊಂಡಿರುತ್ತಾಳೆ. ನಮ್ಮ ಮನೆಯಲ್ಲಿ ನನ್ನ ತಾಯಿ ಜೊತೆ ಎಲ್ಲರ ಸಂಬಂಧ ಚೆನ್ನಾಗಿತ್ತು. ಆಕೆ ಆರೋಗ್ಯವಾಗಿದ್ದಳು. ಆತ್ಮಹತ್ಯೆ ಮಾಡಿಕೊಳ್ಳಲು ಆಕೆಗೆ ಬೇರೆ ಯಾವುದೇ ಕಾರಣ ಇರಲಿಲ್ಲ. ಆದ್ದರಿಂದ ಆರೋಪಿ ವಿರುದ್ಧ ದೂರು ಕೊಟ್ಟಿರುತ್ತೇನೆ. ಆ ದೂರನ್ನು ನಿಪಿ-1 ಎಂದು, ಸಾಕ್ಷಿ ರುಜುವನ್ನು ನಿಪಿ-1(ಎ) ಎಂದು ಗುರುತಿಸಿದೆ. ನನ್ನ ತಾಯಿ ತೀರಿಕೊಂಡು ಮರುದಿನ ದೂರು ಕೊಟ್ಟಿದ್ದೇನೆ. ಮಾನಸಿಕವಾಗಿ ನೊಂದಿದ್ದರಿಂದ ಅದೇ ದಿನ ದೂರು ಕೊಡಲು ಆಗಿರಲಿಲ್ಲ. ನನಗೆ ಕನ್ನಡ ಬರೆಯಲು ಬರುವುದಿಲ್ಲ. ಆದ್ದರಿಂದ ನನ್ನ ಸ್ನೇಹಿತರಿಗೆ ಹೇಳಿ ದೂರನ್ನು ಬರೆಸಿ ಕೊಟ್ಟಿದ್ದೆ.

ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಕೆ.ಎಸ್.ಎನ್.ಪಿ.ರವರಿಂದಃ-

5. ನನ್ನ ತಾಯಿ ಮೃತ ಪಟ್ಟ ಸಮಯದಲ್ಲಿ ನಾವು ಬಾಡಿಗೆ ಮನೆಯಲ್ಲಿ ವಾಸ ಇದ್ದೆವು. ಸದರಿ ಮನೆಯಲ್ಲಿ 7 ವರ್ಷಗಳಿಂದ ವಾಸ ಇದ್ದೆವು. ನಾನು ಡಿಪ್ಲೋಮಾ ಓದಿದ್ದೇನೆ. ನನ್ನ ವಿದ್ಯಾಭ್ಯಾಸವನ್ನು ನನ್ನ ತಂದೆ ಮಾಡಿಸಿದ್ದರು. ನನ್ನ ತಂಗಿಯ ವಿದ್ಯಾಭ್ಯಾಸದ ಖರ್ಚುಗಳನ್ನು ನಾನು ನೋಡಿಕೊಳ್ಳುತ್ತಿದ್ದೆ, ನನ್ನ ತಂಗಿಗೆ ಸರ್ಕಾರದಿಂದ ಬಿ.ಇ. ಸೀಟ್ ದೊರಕಿದ್ದು, ಸರ್ಕಾರಿ ನಿಗದಿ

ಪಡಿಸಿದ ಶುಲ್ಕವನ್ನು ನಾವು ಕಟ್ಟಿದ್ದೆವು. ನನಗೆ ರೂ.10,000/- ಸಂಬಳ ಬರುತ್ತಿತ್ತು. ನನ್ನ ತಂದೆಗೆ ಕೂಡ ಆಗ ರೂ.8,000/- ರಿಂದ 10,000/- ಸಂಬಳ ಬರುತ್ತಿತ್ತು. ನಮ್ಮ ಮನೆಯಲ್ಲಿ ಯಾವುದೇ ವಿಚಾರಗಳನ್ನು ನಾವು ಪರಸ್ಪರ ಮಾತಾಡಿಕೊಳ್ಳುತ್ತಿದ್ದೆವು. ನನ್ನ ಮತ್ತು ನನ್ನ ತಂಗಿಯ ವಿದ್ಯಾಭ್ಯಾಸ ಕ್ಕಾಗಿ ಯಾವುದಾದರೂ ಸಾಲ ಪಡೆದಿದ್ದರೆ ಎನ್ನುವುದು ಗೊತ್ತಿಲ್ಲ. ನನಗೆ ನನ್ನ ತಾಯಿ ಮಾಡುತ್ತಿದ್ದ ವ್ಯವಹಾರಗಳ ಬಗ್ಗೆ ಸಂಪೂರ್ಣ ಮಾಹಿತಿ ಇತ್ತು.

6. ಆರೋಪಿ ಕೂಡ ನಾವು ವಾಸವಿದ್ದ ಏರಿಯಾದಲ್ಲಿಯೇ ವಾಸ ಇದ್ದುದ್ದರಿಂದ ಆಕೆಯ ಪರಿಚಯ ಇತ್ತು. ಆರೋಪಿಯ ಕುಟುಂಬದ ಸದಸ್ಯರ ಬಗ್ಗೆ ಮಾಹಿತಿ ಇಲ್ಲ. ನನ್ನ ತಾಯಿ ಅಕ್ಕ ಪಕ್ಕದವರ ಮನೆಯಲ್ಲಿ ಯಾವುದೇ ಸಾಲ ಪಡೆದಿರಲಿಲ್ಲ. ನನ್ನ ತಾಯಿ ಆರೋಪಿ ಕಡೆಯಿಂದ ರೂ.40,000/- ಸಾಲ ಪಡೆದಿದ್ದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಆರೋಪಿ ಕಡೆಯಿಂದ ಯಾವ ದಿನಾಂಕದಂದು ಅಥವಾ ಯಾವ ವಾರದಂದು ಸಾಲ ಪಡೆಯಲಾಗಿತ್ತು ಎಂದು ಗೊತ್ತಿಲ್ಲ. ನನ್ನ ಮತ್ತು ನನ್ನ ತಂದೆಯ ಆದಾಯ ನಮ್ಮ ಕುಟುಂಬದ ಮಾಸಿಕ ಖರ್ಚುಗಳಿಗೆ ಸಾಕಾಗುತ್ತಿರಲಿಲ್ಲ ಎನ್ನುವುದು ಪ್ರತಿ ವಾರ ರೂ.4,000/- ಗಳನ್ನು ಆರೋಪಿಗೆ ಕೊಡುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ನನ್ನ ತಾಯಿ ಆರೋಪಿಯ ಬಳಿ ಸಾಲ ಕೇಳಿದ್ದು, ಆರೋಪಿ ತನ್ನ ಬಳಿ ಸಾಲ ಕೊಡಲು ಹಣ ಇಲ್ಲ ಎಂದು ಹೇಳಿದ್ದಳು ಮತ್ತು ಅದರಿಂದ ಆರೋಪಿ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ.

7. ಆರೋಪಿ ನನ್ನ ತಾಯಿಗೆ ಸಾಲ ಕೊಟ್ಟಿರಲಿಲ್ಲವಾಗಿ ಆಕೆ ನನ್ನ ತಾಯಿಗೆ ಯಾವುದೇ ಹಣ ಕೊಡುವಂತೆ ಒತ್ತಾಯ ಮಾಡುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಆರೋಪಿ ಮತ್ತು ನನ್ನ ತಾಯಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಆರ್ಥಿಕವಾಗಿ ಸಂಕಷ್ಟದಲ್ಲಿದ್ದು, ಕುಟುಂಬ ನಿರ್ವಹಣೆ ಮಾಡಲು ಸಾಧ್ಯವಾಗದೇ ನಮ್ಮ ವೈಯುಕ್ತಿಕ ಕಾರಣಗಳಿಂದಾಗಿ ನನ್ನ ತಾಯಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನುವುದು ಸರಿಯಲ್ಲ. ಆರೋಪಿ ಕಡೆಯಿಂದ ಯಾವುದೇ ಸಾಲ ಪಡೆದಿರಲಿಲ್ಲವಾದ ಕಾರಣ ಈ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಮೃತಪಟ್ಟಿರುವುದನ್ನು ಬಳಸಿಕೊಂಡು ತಡವಾಗಿ

**ಉದ್ದೇಶ ಪೂರ್ವಕವಾಗಿ ಆರೋಪಿಯ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಹಣಕಾಸಿನ ವ್ಯವಹಾರಗಳನ್ನು ಮಾಡಿದಾಗ ದಾಖಲೆಗಳನ್ನು ತೆಗೆದು ಕೊಳ್ಳುತ್ತಾರೆ ಎಂದರೆ ಸರಿ. ಈ ರೀಯ ಯಾವುದೇ ದಾಖಲೆಗಳು ನಮ್ಮ ಬಳಿ ಇಲ್ಲ ಎಂದರೆ ಸರಿ.**

**ಮರು ವಿಚಾರಣೆ:- - ಇಲ್ಲ -**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**04.04.2022.**

**(ಎಂ.ಎಲ್. ರಘುನಾಥ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು.**